

ಅವಸರಿಸಿದ. ಸ್ಕೂಟಿ ಹತ್ತಿ ಪ್ರಚಂಡ ವೇಗದಲ್ಲಿ ಧಾವಿಸಿ ಬಂದೆ. ಎಲ್ಲರೂ ನನಗಾಗಿ ಕಾಯುತ್ತಿದ್ದರು. ಕೆಲವು ಸಲ ನಮ್ಮ ಈ ಅತೀವ ಫೋಟೋಗ್ರಫಿ ಚಟದ ಬಗ್ಗೆಯೇ ಗಾಬರಿ ಎನಿಸುತ್ತೆ. ಅವಸರದಲ್ಲಿ ಏನಾದರೂ ಎಡವಟ್ಟಾದರೆ ಹೇಗೆಂದು ಭಯವೂ ಆಗುತ್ತೆ. ಕಾಡು ಬಿಟ್ಟು ಊರಂಚಿನ ಅಡಿಕೆ ತೋಟ ಸೇರಿದ್ದ ಕರಿಯ ಸ್ಪ್ರಿಂಕ್ಲರ್ ನೀರಿನಲ್ಲಿ ಆಟವಾಡುತ್ತಿದ್ದ. ದೂರದಲ್ಲಿ ತಾಯಿ ಕೂತಿದ್ದು ಕಾಯುತ್ತಿದ್ದಳು. ಬ್ಲಾಕಿಯ ಜೊತೆ ತಮ್ಮನೂ ಇದ್ದ. ನಾವು ಜೀಪಿನಲ್ಲಿದ್ದು ದೂರದಲ್ಲಿದ್ದ ಕರಿಯನ ಬೈನಾಕ್ಯುಲರ್‌ನಲ್ಲಿ ಗಮನಿಸುತ್ತಿದ್ದೆವು. ಆತ ತೀರಾ ಹತ್ತಿರಕ್ಕೆ ಬಂದು ನಮ್ಮ ಕ್ಯಾಮೆರಾಗೆ ಪೋಸು ಕೊಡುವುದು ಸಾಧ್ಯವೇ ಇರಲಿಲ್ಲ. 'ಕೊನೇಪಕ್ಷ ನೋಡಲು ಸಿಕ್ಕಿತಲ್ಲ ಅದೇ ಪುಣ್ಯವಲ್ಲವೇ?' ಎಂದು ಫಾರೆಸ್ಟರ್ ಅಕ್ಷತಾ ಹೇಳಿದರು. ಇವನ ನೋಡಲು ಜನ ಎಲ್ಲೆಲ್ಲಿಂದಲೋ ಬಂದಿದ್ದರು. ತೋಟದಿಂದ ಎದ್ದು ಅಮ್ಮನ ಹತ್ತಿರ ಬಂದು ಕ್ಯಾತೆ ತೆಗೆದು ಅವಳಿಂದ ಒಂದು ಏಟು ತಿಂದು ಮತ್ತೆ ತೆಪ್ಪಗೆ ಹೋಗಿ ನೆರಳಲ್ಲಿ ಕೂತು ಬಿಟ್ಟ. ಇವನಿಗೆ ಬಿಸಿಲೆಂದರೆ ಅದೇನೋ ಅಲರ್ಜಿ. ಕಪ್ಪು ಚರ್ಮದ ದೇಹಕ್ಕೆ ಬಿಸಿಲು ತೊಂದರೆ ಕೊಡಬಹುದೇನೋ? ಹೀಗಾಗಿಯೋ ಏನೋ ಸದಾ ನಾವು ಪಟವೇ ಸೆಳೆಯಲಾರದಷ್ಟು ದೂರದ ಕತ್ತಲೆಯಲ್ಲಿ ಕೂತು ಬಿಡುತ್ತಾನೆ. ಈ ಬ್ಲಾಕಿಯನ್ನು ನಾನು ಹತ್ತಾರು ಸಲ ನೋಡಿರುವುದೂ ಕೂಡ ಹೀಗೆ ನೆರಳಲ್ಲಿ ಬಿದ್ದುಕೊಂಡಿರುವಾಗ.

ಅನೇಕ ಸಲ ಆಗಿರುವುದು ಕೂಡ ಹೀಗೇನೆ. ನಮ್ಮ ಸಮೀಪದ ಮರದ ನೆರಳ ಛಾಯೆಯಲ್ಲಿ ಈ ಬ್ಲಾಕಿ ಮಲಗಿ ಗೊರಕೆ ಹೊಡೆದಿದ್ದರೂ ಅದು ನಮ್ಮ ಗಮನಕ್ಕೆ ಬಾರದೆ ಚಾನ್ಸು ಮಿಸ್ಸಾಗಿದ್ದಿದೆ. ನಾವು ಅದರ ಸಮೀಪದಿಂದಲೇ ಹೋಗಿದ್ದರೂ ಕರಿಯನ ಇರುವಿಕೆ ನಮಗೆ ಗೊತ್ತಾಗದೆ ಮೋಸವಾಗಿದ್ದು ಉಂಟು. ವಾರಕ್ಕೊಮ್ಮೆ ಕ್ಯಾಮೆರಾ ಟ್ರ್ಯಾಪ್ ಪರಿಶೀಲಿಸುತ್ತಿದ್ದ ಇಲಾಖೆಯವರು 'ಥೋ ನೋಡಿ ಸರ್. ಅವತ್ತು ಆ ಜಂಕ್ಷನ್ ಪಾಯಿಂಟಲ್ಲಿ ಅಷ್ಟೊತ್ತು ಲಂಗೂರ್ ಕಾಲ್ ಇತ್ತು ಅಂತ ಕಾದ್ವಿ. ಲಂಗೂರ್ ಯಾವ ಪ್ರಾಣಿ ನೋಡಿ ಕೂಗ್ತು ಅಂತ ಗೊತ್ತಾಗದೆ ವಾಪಸ್ಸು ಬಂದ್ವಿ. ನೋಡಿದ್ರೆ ಅಲ್ಲೇ ಮರದ ಕೆಳಗಿದ್ದ ಬ್ಲಾಕಿ ಕಂಡಿಲ್ಲ' ಎಂಬ ಬೇಸರದ ಸುದ್ದಿ ತಲುಪಿಸುತ್ತಿದ್ದರು. ಪ್ರಾಣಿಗಳು ಅಡಗಿ ಕೂತಿದ್ದರೆ ಅವುಗಳ ಮೈಬಣ್ಣ ಸುಲಭಕ್ಕೆ ನಮ್ಮ ಕಣ್ಣಿಗೆ ಕಾಣದಂತೆ ಮರೆ ಮಾಚುವ ಕ್ಯಾಮೆಫ್ಲೇಜ್ ಚಮತ್ಕಾರವನ್ನು ಕಾಡಿನ ಹುಲ್ಲು, ಪೊದೆಗಳು, ಕಲ್ಲುಬಂಡೆಗಳು ಮತ್ತು ತರಗಲೆ ನಿರ್ವಹಿಸುತ್ತವೆ. ನಮ್ಮ ಬ್ಲಾಕಿಗೆ ಮರದ ನೆರಳು. ಬಂಡೆಯ ಸಂದಿಗತ್ತಲು, ಕಂಡಿಬಿದ್ದ ಮಣ್ಣಿನ ಕೊರಕಲುಗಳು ಸುಲಭಕ್ಕೆ ಕಾಣದಂತೆ ಆಶ್ರಯ ಕೊಡುವುದೇ ನಮಗೆ ತಲೆನೋವಾಗಿತ್ತು.

ಇವತ್ತು ಪ್ರಾಯಶಃ ತಾಯಿ, ಮಕ್ಕಳಿಗಾಗಿ ಒಂದು ಬೇಟೆ ಇಲ್ಲಿ ಆಡಿದ್ದಾಳೆ. ರಾತ್ರಿಯಿಡೀ ತಿಂದು ಈಗ ರೆಸ್ಟ್ ಪಡೆಯುತ್ತಿರುವ ಈ ಸಂಸಾರ ಇನ್ನೆರಡು ದಿನವಾದರೂ ಇಲ್ಲಿ ನಿಲ್ಲಬಹುದು. ಗಾಳಿ ಬೀಸಿದಾಗ ಕಿಲ್ಲಿಂಗ್ ವಾಸನೆ ನಮ್ಮ ಕಡೆಗೆ ಗಬ್ಬೆಂದು